‘ನನ್ನ ಉದ್ದೇಶ ನಿನಗೆ ಗೊತ್ತೇ ಇದೆಯಲ್ಲವೆ?’ ಕುಹಕ ನಗು ಬೀರಿದ. ಅವನ ದೃಷ್ಟಿಯನ್ನು ನೋಡದೆ ಕೋಪ ನುಂಗಿಕೊಂಡಳು.

‘ಹೌದು, ನೀನು ವಿಶ್ವಾಸದ್ರೋಹಿ. ನನ್ನ ಪ್ರೀತಿಸೋ ನಾಟಕವಿದು. ನಿನ್ನ ಮನಸ್ಸಿನಲ್ಲಿರೋದು ಆ ಲಹರೀನೇ. ಅವಳನ್ನು ಹುಡುಕಿಕೊಂಡು ಅಲೆಯೋ ಅಯೋಗ್ಯ ನೀನು. ಮೂರ್ಖ ನೀನು. ನಿನಗೆ ಸಂಬಂಧ ಪಡದ ವಿಷಯಕ್ಕೆ ಅನಗತ್ಯ ಮೂಗು ತೂರಿಸೋ ಅಲ್ಪ ಬುದ್ಧಿಯವನು ನೀನು’ ತಾರಕ್ಕಕ್ಕೇರಿದ ಮಾತುಗಳು ಅವಳ ಚಿತ್ತ ಕೆಟ್ಟಿರುವುದನ್ನು ಸೂಚಿಸಿತು.

‘ತಾಳ್ಮೆ ಕಳ್ಕೊಳ್ಬೇಡ. ನಾನು ಕೇಳೋ ಪ್ರಶ್ನೆಗೆ ಸಮರ್ಪಕ ಉತ್ತರ ಕೊಟ್ರೆ ಸಾಕು. ನನ್ನ ಪ್ರೀತೀನ ನಾಟಕ ಅನ್ಬೇಡ. ನಿನ್ನನ್ನು ಪ್ರೀತಿಸಿರೋದ್ರಿಂದ ನಿಂಗೆ ಅಪಾಯ ಆಗ್ಬಾರ್ದೂಂತ ನಾನು ಕೇಳ್ತಾ ಇರೋದು. ಈ ನಡುವೆ ಅನಗತ್ಯ ಲಹರಿಯ ವಿಷಯ ಎಳಿಬೇಡ. ಅದರಿಂದ ಮನಸ್ಸು ಮತ್ತಷ್ಟು ಹಾಳಾಗುತ್ತೆ’ ಸಾಂತ್ವನದ ನುಡಿಗಳನ್ನು ಆಡಿದವನ ಕೈ ಮೇನಕಾಳ ಭುಜವನ್ನು ಮೃದುವಾಗಿ ಹಿಡಿಯಿತು. ಆ ಸ್ಪರ್ಶಕ್ಕೆ ಕಣ್ಣೀರು ತುಂಬಿ ಬಂತು. ಸಮಾಧಾನದ ಒರಸು ಅವಳ ಬೆನ್ನನ್ನು ಸವರಿತು. ಕಿರಣನನ್ನು ಗಟ್ಟಿಯಾಗಿ ತಬ್ಬಿಕೊಂಡಳು. ಕಿರಣ ಕೂಡ ಒಂದೆರಡು ನಿಮಿಷ ಮೌನಕ್ಕೆ ಬಲಿಯಾದ. ಕಣ್ಣೀರು ಒರೆಸಿಕೊಂಡ ಮೇನಕಾ ಕಿರಣನಿಂದ ದೂರ ಸರಿದಳು.

‘ಬಂದಿದ್ದೋನು ಕಾಕುಟ್ಟ. ಚಿಕ್ಕಮ್ಮನ ದೂರದ ಸಂಬಂಧಿ ಅಂದಿದ್ದೆ. ಮಹಾ ಶ್ರೀಮಂತ ಕೂಡ. ತಂದೆಯ ಜಮೀನಿನ ಮೇಲೆ ಕಣ್ಣಿಟ್ಟಿರೋನು. ತನ್ನ ಸಂಬಂಧಿ ಕಾಶಮ್ಮ ಅಂದುಕೊಂಡು ನಮ್ಮ ಮನೆತನದ ಮಧ್ಯೆ ಪ್ರವೇಶ ಮಾಡಿದೋನು. ತಂದೆಗೆ ಅವನ ಮೇಲೆ ಸಂಶಯ. ಅದು ಚಿಕ್ಕಮ್ಮನ ಮೇಲೂ ದ್ವೇಷ ಬೆಳೆಯೋ ಹಾಗೆ ಮಾಡ್ತು. ಚಿಕ್ಕಮ್ಮನ ಸ್ವಾತಂತ್ರ್ಯ ಅಪ್ಪ ಕಸಿದು ಬಿಟ್ರು ಅನ್ನೋ ಆರೋಪ ಹೊರಿಸಿ ಜೈಲಿಗೆ ಕಳಿಸೋ ವ್ಯವಸ್ಥೆ ಮಾಡಿದ್ದ. ಆದ್ರೆ ತಂದೆ ವ್ಯವಹಾರ ಚತುರ. ಕಾಕುಟ್ಟನನ್ನು ಎದುರು ಹಾಕಿಕೊಳ್ಳದೆ ಸತ್ಯದ ಅನ್ವೇಷಣೆಗೆ ಹೊರಟರು. ಆತ ಕಾಶಮ್ಮನ ಸಂಬಂಧಿ ಹೌದು. ಮಾತ್ರವಲ್ಲ, ಅವನ ಕಣ್ಣಿದ್ದದ್ದು ಲಹರಿಯ ಮೇಲೆ. ಲಹರಿಯನ್ನು ಮದುವೆಯಾಗೋ ವಿಪರೀತ ಕಲ್ಪನೆ ಅವನದ್ದು. ಅಪ್ಪ ಚಿಕ್ಕಮ್ಮನನ್ನು ಬೈದು ಹೊರಗೆಲ್ಲು ಹೋಗದಂತೆ ತಾಕೀತು ಮಾಡಿದಾಗ ಮಾತ್ರ ಸಂಸಾರದ ನಡುವೆ ಪ್ರತ್ಯಕ್ಷನಾಗಿದ್ದ. ಆದರೆ ಲಹರಿ ಅನಗತ್ಯ ಓಡಾಟ ನಡೆಸ್ತಿದ್ದದ್ದು ಅವನಿಗೆ ಅನುಕೂಲವಾಯ್ತು. ಆನಂತರ ಮಾಯವಾದೋನನ್ನು ನಾನು ಇವತ್ತೇ ನೋಡಿದ್ದು’ ಮೇನಕಾಳಿಂದ ಕಥೆ ಕೇಳಿದ ಕಿರಣ ತತ್ತರಿಸಿದ.

ಲಹರಿಯ ಕಣ್ಮರೆಗೆ ಮೇನಕಾಳ ಮಾತ್ಸರ್ಯ ಕಾರಣವಲ್ಲ! ಕಾಕುಟ್ಟನ ವಕ್ರನೋಟ. ಈಗ ಧುತ್ತನೆ ಬಂದು ಮೇನಕಾಳನ್ನು ಪ್ರಶ್ನಿಸಿದ್ದು ಯಾವ ವಿಷಯಕ್ಕೆ? ಮೇನಕಾ ಈ ಸಂಗತಿಯನ್ನು ಯಾರಿಗೂ ಹೇಳದಿರುವ ಹಿನ್ನೆಲೆ ಯೇನು? ಆಲೋಚನೆಯ ಕಪಿ ಮುಷ್ಟಿಯೊಳಗೆ ಸಿಲುಕಿದ ಕಿರಣ.

‘ಅವನು ಇಲ್ಲಿಗೆ ಬರೋದಿಕ್ಕೆ ಕಾಶಮ್ಮ ಕಾರಣವೇನೋ?’ ಕಿರಣನ ಪ್ರಶ್ನೆಗೆ ಅವನನ್ನು ದಿಟ್ಟಿಸಿದಳು.

‘ಇರಬಹುದು, ನಿನ್ನನ್ನು ಕರೆಸಿರೋದು ಆಕೇನೆ ಇರಬೇಕಲ್ವಾ?’ ಅವಳ ಪ್ರಶ್ನೆಗೆ ನಕಾರಾತ್ಮಕವಾಗಿ ತಲೆಯಲುಗಿಸಿದ.

‘ಇಲ್ಲ ಮೇನಕಾ, ನನ್ನನ್ನು ಇಲ್ಲಿಗೆ ಕರೆಸಿರೋದು ನಿನ್ನ ಮೇಲಿನ ಪ್ರೀತಿ. ನನ್ನ ನೀನು ದೂರವಿಟ್ಟರೂ ಈ ಸಂದರ್ಭದಲ್ಲಿ ನನ್ನ ಇಲ್ಲಿಗೆ ಬರೋ ಹಾಗೆ ಮಾಡಿತು. ನನ್ನ ಬರುವಿಕೆ ಕಾಕತಾಳೀಯವಷ್ಟೆ. ಇಷ್ಟಕ್ಕೂ ನೀನು ನನ್ನ ದೂರವಿಟ್ಟಿದ್ದೇಕೆ? ನಿನ್ನ ಹುಟ್ಟುಹಬ್ಬ ಇವತ್ತು ಅಲ್ಲ ಅನ್ನೋದು ನನಗೆ ಗೊತ್ತು?’ ಅವಳ ಕೈಯನ್ನು ಮೃದುವಾಗಿ ಹಿಡಿದು ಕೇಳಿದ.

ಮೇನಕಾಳ ಕಣ್ಣುಗಳಲ್ಲಿ ಹೊಳಪು ಸಂಪೂರ್ಣ ನಶಿಸಿತು.

‘ಈ ಪಾರ್ಟಿ ನನ್ನ ಹುಟ್ಟುಹಬ್ಬದಲ್ಲ ಅನ್ನೋದು ನಿನಗೆ ಗೊತ್ತು ತಾನೆ? ಇದು ನನ್ನ ಗೆಳೆತಿಯರನ್ನು ಮೆಚ್ಚಿಸೋದಿಕ್ಕೆ ಕರೆದಿರೋ ಪಾರ್ಟಿ’ ಸಮಂಜಸವಾದ ಕಾರಣ ಅಲ್ಲವೆನಿಸಿತು ಕಿರಣನಿಗೆ.

‘ಯಾವ ಉದ್ದೇಶಕ್ಕೆ ಅವರನ್ನು ನೀನು ಮೆಚ್ಚಿಸಬೇಕಿತ್ತು?’ ಉತ್ತರ ಪಕ್ಕನೆ ಹೊಳೆಯಲಿಲ್ಲ ಮೇನಕಾಗೆ.

‘ಗೆಟ್ ಟು ಗೆದರ್ ಅನ್ನೋ ಹಾಗೆ’ ಕಿರಣ ಮುಗುಳ್ನಕ್ಕ.

‘ಹಾಗಾದರೆ ತಂದೆಯ ಸ್ನೇಹಿತರನ್ನೆಲ್ಲಾ ಕರೆಸಿರೋ ಉದ್ದೇಶ ಏನು?’

‘ಸುಮ್ನೆ ಮಾತಿಗೆ ಮಾತು ಬೆಳೆಸಿ ನನ್ನ ಕೆಣಕ್ಬೇಡ. ಉದ್ದೇಶ ಏನು ಇರಬಹುದು. ಈ ಪಾರ್ಟಿ ಅರೇಂಜ್ ಆಗಿದ್ದು ನನ್ನ ಸ್ನೇಹಿತೆಯರಿಗೆ ಮಾತ್ರ’

‘ಹೌದು, ಅದಕ್ಕೇಂತ ನೀನು ನನ್ನ ಹೊರಗಿಟ್ಟಿದ್ದೀಯಾ?’

ಮೇನಕಾಳಿಗೆ ಅಪರಾಧಿ ಭಾವ ಕಾಡಿತು.

‘ಅದಕ್ಕೆ ಪರಿಹಾರವಾಗಿ ನಿನಗೆ ಸ್ಟಾರ್ ಹೊಟೇಲಿನಲ್ಲಿ ಪಾರ್ಟಿ ಕೊಡಿಸ್ತೀನಿ’

‘ಬೇಡ’ ಕಿರಣ ನಯವಾಗಿ ನಿರಾಕರಿಸಿದ.

‘ನಿಮ್ಮ ಫಾರ್ಮ್ ಹೌಸ್‌ನಲ್ಲಿಯೇ ಸಣ್ಣದಾದ ಪಾರ್ಟೀನ ಅರೇಂಜ್ ಮಾಡು. ನಿನಗೆ ನನ್ನ ಮೇಲಿರೋ ಸಂದೇಹನೂ ದೂರವಾಗುತ್ತೆ. ಆ ಪಾರ್ಟಿಗೆ ನಿನ್ನ ಸ್ನೇಹಿತೆಯರನ್ನ ಕರೆಸಿ ನನ್ನನ್ನು ಪರಿಚಯಿಸು’.

ಪ್ರೇಮಿಕೆಯ ಕಣ್ಣುಗಳಲ್ಲಿ ಕುತೂಹಲ, ಅಚ್ಚರಿಗಳು ಮೂಡಿ ಹೊಳಪು ತುಂಬಿತು.

‘ಒಳ್ಳೆಯ ಆಲೋಚನೆ. ಹಾಗೇ ಮಾಡಿದರಾಯಿತು’

‘ಸರಿ, ಆದ್ರೆ ಈ ಪಾರ್ಟಿ ನಡೆಯೋದು ನಿನ್ನ ಡ್ಯಾಡಿಗಾಗಲಿ, ಚಿಕ್ಕಮ್ಮನಿಗಾಗಲಿ ಯಾರಿಗೂ ತಿಳಿಯೋದು ಬೇಡ’

‘ಅದು ಹೇಗಾಗುತ್ತೆ? ಅವರಿಗೆ ತಿಳಿಸದೆ ನಾನು ಏನೂ ಮಾಡೋದಿಲ್ಲ. ತಂದೆಗಂತು ಹೇಳಲೇ ಬೇಕು’

‘ಹಾಗ್ಮಾಡ್ಬೇಡ. ನಿನ್ನನ್ನು ಸರ್‌ಪ್ರೈಸ್ ಮಾಡೋವಂತಹ ವಿಷಯ ಆ ದಿನ ನಡೆಯುತ್ತೆ’ ಮೇನಕಾ ಕಣ್ಣರಳಿಸಿದಳು.

‘ಏನದು, ನನ್ನನ್ನು ಸರ್‌ಪ್ರೈಸ್ ಮಾಡೋವಂತದ್ದು?’

‘ಅದು ನಿಗೂಢ’

ಅವನನ್ನು ಪ್ರಶ್ನಿಸುವುದು ವ್ಯರ್ಥವೆನಿಸಿತು.

‘ಹಾಗಾದರೆ ಒಂದು ದಿನಾನ ನೀನು ಗೊತ್ತು ಮಾಡು. ನಾನು ಫಾರ್ಮ್ ಹೌಸ್‌ನ ಪಾರ್ಟಿಗೆ ಅರೇಂಜ್ ಮಾಡಿಸ್ತೀನಿ’

ಕಿರಣ ತಲೆಯಲುಗಿಸಿದವನೆ ಮೇನಕಾಗೆ ವಿದಾಯ ಸೂಚಿಸಿ ಹೊರಗೆ ಬಂದ. ಮೇನಕಾ ನಡೆಸಿದ ಪಾರ್ಟಿಯ ಉದ್ದೇಶ ತಲೆಯಲ್ಲಿ ರಿಂಗಣಿಸಿತು.

ಇಂದಿಗೆ ಸರಿಯಾಗಿ ಲಹರಿ ಕಣ್ಮರೆಯಾಗಿ ಮೂರು ತಿಂಗಳುಗಳು! ಭುಜಂಗೇಶರಾಯರ ಮೊದಲ ಪತ್ನಿಯ ಮಗಳಿಗೆ ಮಲತಾಯಿಯ ಮಗಳು ಲಹರಿ ತೊಡಕಾಗಿದ್ದಳೇ?!

***

ಆಲೆ ಮನೆಯತ್ತ ಇನ್ಸ್‌ಪೆಕ್ಟರ್ ನೋಟ

ಇನ್ಸ್‌ಪೆಕ್ಟರ್ ರಾಜಧಾನಿಯ ಪಲ್ಸರ್ ವೇಗ ತಗ್ಗಿಸಿಕೊಂಡು ಟಾರು ರಸ್ತೆಯಿಂದ ಅಗಲ ಕಿರಿದಾದ ಮಣ್ಣಿನ ರಸೆಗೆ ಇಳಿಯಿತು. ವೇಗ ಇನ್ನಷ್ಟು ಕಡಿಮೆಯಾದಾಗ ಹಿಂದೆ ಕುಳಿತಿದ್ದ ಪೊಲೀಸ್ ಪೇದೆ ಸಾರಂಗ ಎದುರಿಗೆ ಕುತೂಹಲದ ನೋಟ ಹರಿಸಿದ.

ರಸ್ತೆಯ ಇಕ್ಕೆಲಗಳಲ್ಲಿ ಹಚ್ಚ ಹಸುರಿನ ಪೈರು ಗಾಳಿಯ ಬೀಸುವಿಕೆಗೆ ಓಲಾಡುತ್ತಿತ್ತು. ಜಾರುವ ಎಳೆಯಂತಹ ಬತ್ತದ ಗಿಡಗಳು ರೇಶಿಮೆಯ ಬಟ್ಟೆಯಂತೆ ಕಾಣಿಸುತ್ತಿತ್ತು. ಸಮೃದ್ಧ ಬತ್ತದ ತೆನೆಗಳು ತುಂಬಿಕೊಂಡ ಬಳಿಕ ಕಾಣುವ ಸೊಬಗೇ ಬೇರೆ! ಅವುಗಳಿಂದ ಹಾದು ಬರುವ ಗಾಳಿಯೂ ಬೈಕ್‌ನ ವೇಗಕ್ಕೆ ತಡೆಯೊಡ್ಡಿದಂತೆ ಇನ್ಸ್‌ಪೆಕ್ಟರ್ ರಾಜಧಾನಿ ಇನ್ನಷ್ಟು ನಿಧಾನವಾಗಿ ಗಾಡಿ ಓಡಿಸಲಾರಂಭಿಸಿದ. ಸಾರಂಗನ ಕುತೂಹಲ ಮಾಯವಾಗಿ ತಾಳ್ಮೆ ಕೊನೆಯಾಗುತ್ತಿತ್ತು. ಅಧಿಕಾರಿಗೆ ಎದುರಾಡದೆ ಸುಮ್ಮನೆ ಕುಳಿತು ಇಕ್ಕೆಲಗಳ ಹಸಿರನ್ನು ಕಣ್ಣು ತಣಿಯುವಷ್ಟು ನೋಡುತ್ತಿದ್ದ.

ಮುಳ್ಳು ಬೇಲಿಯನ್ನು ದಾಟಿ ಬೈಕ್ ಕಿರು ಕಾಲುದಾರಿಯಲ್ಲಿ ಓಡುತ್ತಿತ್ತು. ಅಲ್ಲಿಯವರೆಗೂ ತಾಳ್ಮೆಯಿಂದ ಕುಳಿತಿದ್ದ ಪಿಸಿಯ ಕುತೂಹಲ ಜೊತೆಗೆ ತಾಳ್ಮೆಯೂ ತಪ್ಪಿತು. ಎಂದೂ ನೋಡಿರದ ಹೊಸ ದಾರಿ ಇದು. ಅಧಿಕಾರಿ ಜಾಲಿ ರೈಡ್‌ಗೆ ಹೊರಟಿರುವುದೆ? ಪ್ರಶ್ನೆ ನಾಲಗೆಯವರೆಗೂ ಇಳಿಯಿತು.

‘ಸಾರ್, ನಿಮಗೆ ದಾರಿ ತಪ್ಪಿರಬೇಕೇನೋ?’

ಅಧಿಕಾರಿ ಪಿಸಿಯ ಪ್ರಶ್ನೆಗೆ ತುಟಿ ಎರಡು ಮಾಡದೆ ಒಂದೇ ವೇಗದಲ್ಲಿ ಕಾಲುದಾರಿಯಲ್ಲಿ ಸಾಗುತ್ತಿದ್ದ.

ಬತ್ತದ ಗದ್ದೆಗಳನ್ನು ದಾಟಿ ಸ್ವಲ್ಪ ಮುಂದಕ್ಕೆ ಆಳೆತ್ತರಕ್ಕೂ ನಿಂತ ಕಬ್ಬಿನ ತೋಟ. ಕಬ್ಬು ಸಿಹಿಗಟ್ಟಿರುವಂತೆ ಬಿಳಿಯ ನುಣ್ಣನೆಯ ಹೂವು ಬಿಟ್ಟು ಕೋಲುಗಳು ಎಲೆಯಿಂದ ಮುಚ್ಚಿದ್ದವು. ಕಂದು ಬಣ್ಣಕ್ಕೆ ಕಪ್ಪಗಿನ ಮೆರುಗು ನೀಡಿದ ಕಬ್ಬಿನ ಕೋಲುಗಳು ನೇರವಾಗಿ ಬೆಳೆದು ಕಲಾಕಾರನ ಚೌಕಟ್ಟಿನೊಳಗಿನ ಚಿತ್ರದಂತೆ ಕಾಣುತ್ತಿದ್ದವು. ಕಬ್ಬಿನ ತೋಟದ ಕೊನೆಗೆ ಸಿಮೆಂಟಿನ ಗಾರೆಯೊಂದಿಗೆ ಸ್ಮಾರಕದಂತೆ ನಿಂತ ಆಲೆಮನೆ!

ಇನ್ಸ್‌ಪೆಕ್ಟರ್ ಬೈಕ್ ನಿಲ್ಲಿಸಿ ಸುತ್ತಲೂ ದೃಷ್ಟಿಸಿದ. ಪೊಲೀಸ್